ಕಡೂರು ಡಿಸ್ಟ್ರಿಕ್ಟ್ ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟ್‌ನಿಂದ.

1884ನೇ ಇಸವಿ ಮಿಸಲೇನಿಯಸ್ ಕೇಸ್ ನಂಬರ್ 15.

ಮೃತಪಟ್ಟ ಬೇಲೂರ ತಾಲ್ಲೂಕು ಅರೇಹಳ್ಳಿ ಮಾಗಣಿ ಶಿದ್ದರಹಳ್ಳಿ ಪೇಟೆ ನಿರ್ವಾಣ ಶಟ್ಟಯ್ಯ ಆಸ್ತಿ ವಿಷಯದಲ್ಲಿ—

ಅರ್ಜೀದಾರ ರುದ್ರಶಟ್ಟಯ್ಯ, ಮೃತಪಟ್ಟ ನಿರ್ವಾಣಶಟ್ಟಯ್ಯ ತಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿದ್ದರಹಳ್ಳಿ ಪೇಟೆಲಿರುವ ರುದ್ರಶಟ್ಟಯ್ಯ ಶಿದ್ದರಹಳ್ಳಿ ಪೇಟೆ ವಾಸಸ್ಥನಾಗಿ ಮೃತಪಟ್ಟ ನಿರ್ವಾಣ ಶಟ್ಟಯ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ರುದ್ರಶಟ್ಟಯ ಅರ್ಜಿಯನ್ನು ಸ್ಯ 1884ನೇ ಇಸವಿ ಮಾರ್ಚೀ 27ರಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಿರ್ವಾಣಶಟ್ಟಿ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1884ನೇ ಇಸವಿ ಫಿಬ್ರುವರೀ 18ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಮಿಸಲೇನಿಯಸ್ ನಂಬರ್ 21.

ಮೃತಪಟ್ಟ ಚಿಕ್ಕಮಗಳೂರು ತಾ|| ಕಳವಾಸೆ ಪಟೇಲ್ ಶಿದ್ದೇಗವ್ವಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಮಲ್ಲೇಗವ್ವಡನು, ಮೃತಪಟ್ಟ ಸದರೀ ಶಿದ್ದೇಗವ್ವಡನು ಅಂಣನಾಗಬೇಕೆಂಬ ಹಕ್ಕುದಾರಿಮೇಲೆ ಕಳವಾಸೇ ಮಲ್ಲೇಗವ್ವಡನು ಸದರೀ ವಾಸಸ್ಥನಾಗಿ ಮೃತಪಟ್ಟ ಶಿದ್ದೇಗವ್ವಡನ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮಲ್ಲೇಗವ್ವಡನ ಅರ್ಜಿಯನ್ನು 1884ನೇ ಇಸವೀ ಏಪ್ರಲ್ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿದ್ದೇಗವ್ವಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಫಿಬ್ರುವರೀ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಮಿಸಲೇನಿಯಸ್ ಕೇಸ್ ನಂಬರ್ 22.

ಮೃತಪಟ್ಟ ಚಿಕ್ಕಮಗಳೂರು ಟವ್ನ ಮಳಲೂರು ಹುಸೇನ್‌ಸಾಬಿ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮಿನ್ನಿ ಹೈದರಸಾಹೆಬನು, ಮೃತಪಟ್ಟ ಹುಸೇನ್‌ಸಾಬಿಯು ಪಾಲದಾರ ಮತ್ತು ಭಾವನಾಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಮಗಳೂರು ಟವನ್ನಲ್ಲಿ ವಾಸಸ್ಥನಾಗಿ ಮೃತಪಟ್ಟ ಹುಸೇನ್‌ಸಾಬಿಯ ಜೆಂದಗೀ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಹೈದರಸಾಬನ ಅರ್ಜಿಯನ್ನು 1884ನೇ ಇಸವಿ ಏಪ್ರಿಲ್ 3ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹುಸೇನ್‌ಸಾಹೆಬನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 28ರಲ್ಲು ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಮಿಸಲೇನಿಯಸ್ ನಂಬರ್ 27.

ಮೃತಪಟ್ಟ ಬೇಲೂರು ತಾಲ್ಲೂಕು ಅರೇಹಳ್ಳಿ ಪೇಟೆ ರುದ್ರಪ್ಪಶಟ್ಟಿ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಜೆಂಣೀ ಕಲ್ಯಾಣಪ್ಪಶಟ್ಟಿ ಮಗ ಶಾಂತವೀರಪ್ಪಶಟ್ಟಿಯು, ಮೃತಪಟ್ಟ ರುದ್ರಪ್ಪಶಟ್ಟಿಗೆ ತಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ಅರೇಹಳ್ಳಿ ಪೇಟೆ ಶಾಂತವೀರಪ್ಪಶಟ್ಟಿಯು, ಅರೇಹಳ್ಳಿ ವಾಸಸ್ಥನಾಗಿ ಮೃತಪಟ್ಟ ರುದ್ರಶಟ್ಟಿ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ಶಾಂತವೀರಪ್ಪಶಟ್ಟಿಯ ಅರ್ಜಿಯನ್ನು 1884ನೇ ಇಸವಿ ಏಪ್ರಿಲ್ ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರುದ್ರಶಟ್ಟಿ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದತಿಳಿಯಪಡಿಸಿ ಇದೆ.

1884ನೇ ಇಸವಿ ಮಾರ್ಚೀ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಮಿಸಲೇನಿಯಸ್ ಕೇಸ್ ನಂಬರ್ 25.

ಮೃತಪಟ್ಟ ಚಿಕ್ಕಮಗಳೂರು ತಾಲ್ಲೂಕು ಅರಿಷಣಗುಪ್ಪೆ ಚನ್ನೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಅರಿಷಣಗುಪ್ಪೆ ಹೆಬ್ಬಳ್ಳಿ ನಂಜೇಗೌಡನು, ಮೃತಪಟ್ಟ ಚನ್ನೇಗೌಡನಿಗೆ ಅಂಣನಾಗಬೇಕೆಂಬ ಹಕ್ಕುದಾರೀ ಮೇಲೆ ಅರಿಷಣಗುಪ್ಪೆ ನಂಜೇಗೌಡನು, ಅರಿಷಣಗುಪ್ಪೆ ವಾಸಸ್ಥನಾಗಿ ಮೃತಪಟ್ಟ ಚನ್ನೇಗೌಡನ ಜಿಂದಗೀ ಬಗ್ಯಾಗ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಂಜೇಗೌಡನ ಅರ್ಜೀಯನ್ನು 1884ನೇ ಇಸವೀ ಏಪ್ರೆಲ್ ತಿಂಗಳು ತಾರೀಖು 9ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನೇಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

1884ನೇ ಇಸವಿ ಮಾರ್ಚೀ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಬಿ. ತಿರುಮಲಾಚಾರ್,
ಸಬ್ ಜಡ್ಜ್.

ಸ್ ೯ 1884ನೇ ಇಸವಿ ಫಿಬ್ರವರೀ ಮಾಹೇ ಬಾಬತು ಕಾಲಸ್ಥಿತೀ ರಿಪ್ರೋರ್ಟುಗಳು.

ತಿವಮೊಗ್ಗಾ ಡಿಸ್ಟ್ರಿಕ್ಟು.

ಮಳೆ—ಈ ತಿಂಗಳೊಳಗೆ ಮಳೆ ಬೀಳಲಿಲ್ಲ.
ಫಸಲ್ ಕಟುವಾದ್ದು—ಗನ್ನಾ, ತೊಗರಿ, ಕಡ್ಲೆ ಮತ್ತು ಅರಳೆ.
ಬೀಜವೇರಾವ್—ಈ ತಿಂಗಳೊಳಗೆ ಕಾರ್‌ನೆಲ್ಲು ಮತ್ತು ಗನ್ನಾ ಪೇರಾವಾದವು, ಅವ್ಕ್ಕೆವಳ್ಳೀ ಸ್ಥಿತಿಯಲ್ಲಿವೆ.
ಜನಾರೋಗ್ಯ—ಸಾದಾರಣವಾಗಿ ಚನ್ನಾಗಿದೆ, ಆದರೆ ಡಿಸ್ಟ್ರಿಕ್ಟಿನ ಕೆಲವು ಪ್ರದೇಶಗಳಲ್ಲಿ ಜ್ವರ ವ್ಯಾಪಿಸಿತ್ತು.
ದಾರಣೆ—ವಂದೇರೀತಿಯಾಗಿದೆ.

ಪಿ. ಪಂಚನಾಥರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟು.

ಮಳೆ—ಯಿಲ್ಲ.
ಬೀಜವೇರಾವಾದ್ದು—ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಗನ್ನಾ; ಹಾಸನ ತಾಲ್ಲೂಕಿನಲ್ಲಿ ಗನ್ನಾ ಮತ್ತು ವೈಶಾಖೀ ನೆಲ್ಲು; ಬೇಲೂರು ತಾಲ್ಲೂಕಿನಲ್ಲಿ ಕಡ್ಲೆ ಮತ್ತು ಮೆಂಥ್ಯ ಪೇರಾವಾದವು.

ಬೆಳೆಗಳ ಸ್ಥಿತಿ—ಸಾದಾರಣವಾಗಿ ಚನ್ನಾಗಿದೆ.
ಫಸಲ್ ಕಟುವಾದ್ದು—ತರೀಕೆರೆ ತಾಲ್ಲೂಕಿನಲ್ಲಿ ಕರಾಸಾನಿ, ಅವರೆ, ಹುರಳಿ, ಹರಳು, ಕಡ್ಲೆ, ಗನ್ನಾ ಮತ್ತು ಮೆಣಸಿನಕಾಯಿ; ಕೊಪ್ಪ ತಾಲ್ಲೂಕಿನಲ್ಲಿ ಅಡಿಕೆ, ಗನ್ನಾ ಮತ್ತು ಕಾಫಿ ಕಟುವಾಗುವು. ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಗನ್ನಾ ಮತ್ತು ಕಡ್ಲೆ ಕಟುವಾಗುತ್ತಿವೆ. ಕಡೂರು ತಾಲ್ಲೂಕಿನಲ್ಲಿ ಗನ್ನಾ, ಕಡ್ಲೆ, ಗೋಧಿ, ಮೆಂಥ್ಯ, ಧನಿಯ, ಅವರೆ ಮತ್ತು ತೊಗರಿ ಕಟುವಾಗುತ್ತಿವೆ. ಮೂಡಗೆರೆ ತಾಲ್ಲೂಕಿನಲ್ಲಿ ಕಾಫಿ ಮತ್ತು ಅಡಿಕೆ; ಹಾಸನ ತಾಲ್ಲೂಕಿನಲ್ಲಿ ಗನ್ನಾ ಮತ್ತು ತೊಗರಿ; ಬೇಲೂರು ತಾಲ್ಲೂಕಿನಲ್ಲಿ ಗನ್ನಾ, ಅವರೆ, ಹುರಳಿ ಮತ್ತು ಹರಳು; ಅರಸೀಕೆರೆ ತಾಲ್ಲೂಕಿನಲ್ಲಿ ಕಡ್ಲೆ, ಧನಿಯ, ತೊಗರಿ, ಅವರೆ ಮತ್ತು ಹರಳು ಕಟುವಾದವು.

ಕಾಲಸ್ಥಿತಿ—ಚನ್ನಾಗಿದೆ.
ಜನಾರೋಗ್ಯ—ಮೂಡಗೆರೆ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಕಲ್ಲು ಪೆಡಬು ಮತ್ತು ಹಾಸನ ತಾಲ್ಲೂಕಿನಲ್ಲಿ ಜ್ವರ ವ್ಯಾಪಿಸಿದ್ದವು.